ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಸೆಕ್ರೆಟೇರಿಯಟ್‌ನಲ್ಲಿರತಕ್ಕಂಥ ಸಿವಿಲ್ ಸರ್ವೀಸ್‌ನವರಲ್ಲದೇ ಇರುವವರನ್ನು ಮತ್ತು ಚೆಕ್ಕಿಕಲ್ ಮ್ಯಾ ಅಲ್ಲದೇ ಇರುವವರನ್ನು ಹೊರಗಡೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಯಾವ ಅಡ್ಡಿ ಇದೆ ?

*ಶ್ರೀ ಕೆ. ಹನುಮಂತಯ್ಯ.—ಇದುವರೆಗೂ ರೂಲ್ಸ್ ಪ್ರಕಾರ ಅಡ್ಡಿ ಇತ್ತು. ಇನ್ನುಮೇಲೆ ಆ ಸಂಪ್ರದಾಯವನ್ನು ಬದಲಾವಣೆ ಮಾಡಬೇಕೆಂದು ಯೋಚನೆ ಮಾಡಲಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಹಿಂದೆ ಮಾರ್ಚಿ 9 ನೇ ತಾರೀಖು ಶ್ರೀಮಾನ್ ರಾಮರಾಯರು ಹಾಕಿದ ಪ್ರಶ್ನೆಗೆ "ಮೂರು ವರ್ಷಗಳಿಗೆ ಮೇಲ್ಪಟ್ಟ ಇಲ್ಲೇ ಇರತಕ್ಕವರು ಯಾರಾದರೂ ಇದ್ದರೆ, ಅದು ನನ್ನ ಗಮನಕ್ಕೆ ಬಂದರೆ ವರ್ಗಮಾಡುತ್ತೇವೆ" ಎಂದು ಹೇಳಿದ್ದೀರಿ. ಇಲ್ಲಿ ತಾವು ಕೊಟ್ಟಿರತಕ್ಕ 54 ಜನರು ಒಂದೇ ಬ್ರಾಂಚಿನಲ್ಲಿ ಐದು ವರ್ಷಗಳಿಗೆ ಮೇಲ್ಪಟ್ಟು ಇದ್ದರೆ, ವರ್ಗಮಾಡಬೇಕಾಗಿದ್ದರೆ ತಾವು ಅನುಸರಿಸುವ ಕ್ರಮ ಏನು ಸ್ವಾಮಿ ?

ಶ್ರೀ ಕೆ. ಹನುಮಂತಯ್ಯ.—ವರ್ಗ ಮಾಡತಕ್ಕದ್ದಕ್ಕೆ ಒಂದು ಸಂಪ್ರದಾಯ, ನಿಯಮ ಇತ್ತು. ಆ ಸಂಪ್ರದಾಯ, ನಿಯಮವನ್ನು ಬದಲಾವಣೆಮಾಡದೆ ಏನೂ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ಈಗ ಆ ನಿಯಮವನ್ನು ಬದಲಾವಣೆಮಾಡತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ತಾವು ಕೊಟ್ಟಿರತಕ್ಕ ಲಿಸ್ಟ್‌ನಲ್ಲಿ ಡೆವಲಪ್‌ಮೆಂಟ್ ಬ್ರಾಂಚಿನ ಲಿಸ್ಟ್ ಕೊಡದೇ ಇರುವುದಕ್ಕೆ ಕಾರಣವೇನು ?

Sri K. HANUMANTHAIYA.—I do not know. Notice.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದು ಉದ್ದೇಶಪೂರ್ವಕವಾಗಿ ಆಗಿದೆ. ಇದನ್ನು ವಿಚಾರಣೆಮಾಡಿ, ಇಫರ್‌ಮೇಷ್ ಕೊಡದೇ ಇರುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

Sri K. HANUMANTHAIYA.—Yes, Sir.

Export of cardamom.

Q.—221. Sri G. PUTTASWAMY (Chikmagalur-Mudigere—Scheduled Castes).—

Will the Government be pleased to state:—

(*a*) whether it has come to their notice that the Cardamom Association at Mudigere has sent a resolution to the Government regarding the recommendation to be made to the Central Government for starting an All-India Cardamom Board and grant of necessary facilities for export out of India;

(*b*) the action taken on the above resolution;

(*c*) whether it has come to their notice that the Cardamom Association at Mudigere is repeatedly urging for starting a Cardamom Research Station either at Mudigere or at Saklespur ?

A.—Dr. R. NAGAN GOWDA (Minister for Agriculture).—

(*a*) A resolution passed by the Cardamom growers of Mudigere and Manjarabad Taluks in their meeting held at Mudigere on 7th December 1952 in this behalf has been received by the Government.

(*b*) The formation of a Cardamom Board is an all-India question. The Spices Enquiry Committee appointed by Government of India have been examining the question of increasing production and improving marketing of several spices including Cardamom as also the question of setting up of a Cardamom Board for the purpose.

(*c*) Yes.

ಶ್ರೀ ಜಿ. ಪುಟ್ಟಸ್ವಾಮಿ.—(ಬ) ಪ್ರಶ್ನೆಗೆ ಉತ್ತರವಾಗಿ ಕೇಂದ್ರ ಸರ್ಕಾರದಿಂದ ನೇಮಕಮಾಡಲ್ಪಟ್ಟಿರುವ ಸಮಿತಿಯವರು ಪರಿಶೀಲನೆ ಮಾಡುತ್ತಾರೆ ಎಂದು ಹೇಳಿದ್ದೀರಿ. ನಾನು ಕೇಳಿರುವುದು ಈ ನಿರ್ಣಯದ ವಿಷಯದಲ್ಲಿ ಮೈಸೂರು ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮ ಏನು ಎಂದು.

ಡಾ॥ ಆರ್. ನಾಗನಗೌಡ.—ಈ ಒಂದು ಬೋರ್ಡನ್ನು ಇಂಡಿಯಾ ಸರ್ಕಾರದವರು ಮಾಡತಕ್ಕದ್ದು; ಈ ವಿಷಯ ಆಲೋಚನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಏನು ಮಾಡಿದ್ದೀರಿ ಎಂದು ರಿಮೈಂಡರ್ ಕಳುಹಿಸಿದ್ದೇವೆ ಬೇರೆ ಇನ್ನೇನಾದರೂ ಇದ್ದರೆ ಕೇಳಿ ?

ಶ್ರೀ ಜಿ. ಪುಟ್ಟಸ್ವಾಮಿ.—ಮೈಸೂರು ಸರ್ಕಾರದವರಿಗೂ, ಕೇಂದ್ರ ಸರ್ಕಾರದವರಿಗೂ ಈ ವಿಲಕ್ಕಿರಿನರ್ಚ್ ಸ್ಪೇಷ್ ಸ್ಥಾಪನೆ ಮಾಡುವ ವಿಚಾರದಲ್ಲಿ ಏನು ಪತ್ರವ್ಯವಹಾರ ನಡೆದಿದೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಅಧ್ಯಕ್ಷರು.—ಅದನ್ನು ಈಗ ತಿಳಿಸುವುದಕ್ಕಾಗುವುದಿಲ್ಲ; ಬೇರೆ ಸಂದರ್ಭದಲ್ಲಿ ತಿಳಿದುಕೊಳ್ಳಿ.

ಡಾ॥ ಆರ್. ನಾಗನಗೌಡ.—ತಮಗೆ ಇಫರ್‌ಮೇಷ್ ಸರಿಯಾಗಿ ಕೊಟ್ಟಿದ್ದೇನೆ. ಅಗ್ರಿಕಲ್ಚರಲ್ ರಿನರ್ಚ್ ಸೆಕ್ಷನವರು ಒಂದು ರಿನರ್ಚ್ ಸ್ಟೇಷ್ ಅಲ್ಲಿ ಸ್ಥಾಪನೆ ಮಾಡಬೇಕೆಂದು ತೀರ್ಮಾನಮಾಡಿದ್ದಾರೆ. ಸಕಲೇಶಪುರದಲ್ಲಿ ಮಾಡಬೇಕೆ, ಮೂಡಿಗೆರೆಯಲ್ಲಿ ಮಾಡಬೇಕೇ ಎಂಬ ಬಗ್ಗೆ ಜಾಗ ಕೂಡ ನೋಡಿಕೊಂಡು ಬಂದಿದ್ದಾರೆ. ಇಷ್ಟರಲ್ಲೇ ಆ ಕೆಲಸ ನೆರವೇರುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ.—ಮೂಡಿಗೆರೆಯಲ್ಲಿ ಸ್ಥಾಪನೆ ಮಾಡಬೇಕೆಂದು ಆಲೋಚನೆ ಮಾಡಿದ್ದೀರಾ ಅಥವಾ ಸಕಲೇಶಪುರದಲ್ಲಿ ಸ್ಥಾಪನೆಮಾಡಬೇಕೆಂದು ಆಲೋಚನೆ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಸಕಲೇಶಪುರದಲ್ಲಿ ಅನುಕೂಲ ಹೆಚ್ಚು ಆಗಬಹುದು ಎಂದು ಹೇಳಿ ಡಿಪಾರ್ಟುಮೆಂಟಿನವರು ಹೇಳಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮೂಡಿಗೆರೆ ತಾಲ್ಲೂಕಿನಲ್ಲಿ ಶ್ರೀಮಾನ್ ಬಿ. ಎಚ್. ಕೃಷ್ಣೇಗೌಡ ಎಂಬುವರು ಇವಕ್ಕಾಗಿ ಸ್ವಲ್ಪ ಜಾಗವನ್ನೂ ಸಹ ಬಿಟ್ಟುಕೊಡುತ್ತೇನೆ ಎಂದು ತಿಳಿಸಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಆ ಸಮಾಚಾರ ನನ್ನಲ್ಲಿ ಈಗ ಇಲ್ಲ. ಸಕಲೇಶಪುರದಲ್ಲಿ ಸ್ಥಾಪನೆ ಮಾಡುವುದರಿಂದಲೇ ಹೆಚ್ಚು ಅನುಕೂಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—1953ನೇ ಇಸವಿಯಲ್ಲಿ ಎಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಬೇಳೆಯಾಗಿತ್ತೋ ಅದಕ್ಕಿಂತ ಬಹಳ 1954ರಲ್ಲಿ ಕಡಮೆ ಪ್ರಮಾಣದಲ್ಲಿ ಬೆಳೆಯಾಗಿದೆ. ಇದರಿಂದ ರೈತರಿಗೆ ಬಹಳ ನಷ್ಟವಲ್ಲವೇ ?

ಡಾ॥ ಆರ್. ನಾಗನಗೌಡ.—ಅದಕ್ಕೋಸ್ಕರವೇ ಈ ಸಂಶೋಧನಾ ಕಾರ್ಯವನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಇದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹೋದ ಅಧಿವೇಶನದಲ್ಲೂ ಸಹ ಇದನ್ನು ತಮ್ಮ ಗಮನಕ್ಕೆ ತಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ನಿಜ. ಅದಕ್ಕೋಸ್ಕರವೇ ಇದಕ್ಕೆ ಸಂಬಂಧಪಟ್ಟವರನ್ನು ಕಳುಹಿಸಿ ಏರ್ಪಾಡು ಮಾಡಲು ಪ್ರಯತ್ನಮಾಡುತ್ತಾ ಇದ್ದೇವೆ.

Electricity.

(Step to augment production).

Q.—241. Sri G. NARAYANA GOWDA (Mulbagal—Srinivasapur).—

Will the Government be pleased to state :—

(*a*) whether the present production of electric power is sufficient for the needs in the State ;

(*b*) if the answer is in the negative, what steps they intend taking for further production ?

A.—Dr. R. NAGAN GOWDA (Minister for Agriculture).—

(*a*) No ; it will not meet the needs of the State beyond 1955-56.

(*b*) New schemes such as (i) Shimsha Extension and (ii) Sharavathi Expansion are under contemplation.

1 P.M.

ಶ್ರೀ ಜಿ. ನಾರಾಯಣಗೌಡ—ಶಿಂಷಾ ವಿದ್ಯುಚ್ಛಕ್ತಿ ವಿಸ್ತರಣೆ ಮತ್ತು ಶರಾವತಿ ವಿದ್ಯುಚ್ಛಕ್ತಿ ಬಡಾವಣೆ—ಈ ಹೊಸ ಯೋಜನೆಗಳನ್ನು ಯಾವಾಗ ಕಾರ್ಯರೂಪಕ್ಕೆ ತರುತ್ತೀರಿ ?

ಡಾ॥ ಆರ್. ನಾಗನಗೌಡ.—ಈಗ ಅವು ಬಹಳ ತೀವ್ರವಾದ ಪರ್ಯಾಲೋಚನೆಯಲ್ಲಿವೆ. ಪ್ಲಾನಿಂಗ್ ಕಮಿಷ್ಷ ಪರವಾಗಿ ಒಂದು ಸಮಿತಿಯವರು ಬಂದಿದ್ದರು ಮತ್ತು ಇಂಜಿನಿಯರವರು ಬಂದಿದ್ದರು. ಅವರು ಇಲ್ಲಿ ಅದಕ್ಕೆ ಸ್ಪೆಟು ಕೊಡಿ ಎಂದು ಕೇಳಿ ಸಂಬಂಧಪಟ್ಟ ವಿಚಾರ ತಿಳಿದುಕೊಂಡಿದ್ದಾರೆ. ನಾವೂ ಬಹಳ ತೀವ್ರವಾಗಿ ಕೆಲಸಮಾಡುತ್ತಿದ್ದೇವೆ.

ಶ್ರೀ ಜಿ. ನಾರಾಯಣಗೌಡ.—ಶಿಂಷಾ ವಿದ್ಯುಚ್ಛಕ್ತಿ ವಿಸ್ತರಣೆಯಿಂದ ಎಷ್ಟು ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆ ?

ಡಾ॥ ಆರ್. ನಾಗನಗೌಡ.—ನಮಗೆ ಬರುವುದು 18—19 ಸಾವಿರ ಕಿಲೋವಾಟ್ಸ್ ಇರಬಹುದು.

ಶ್ರೀ ಜಿ. ನಾರಾಯಣಗೌಡ.—ಈಗ ಉತ್ಪತ್ತಿಯಾಗುತ್ತಿರುವ 1,15,000 ಕಿಲೋವಾಟ್ಸ್ ವಿದ್ಯುಚ್ಛಕ್ತಿಯಲ್ಲಿ ನಮ್ಮ ದೇಶಕ್ಕೆ ಬೇಕಾದಷ್ಟನ್ನು 1955-56ನೆಯ ಸಾಲಿನವರೆಗೆ ಇಟ್ಟುಕೊಂಡು ಉಳಿದುದನ್ನು ಬೇರೆ ದೇಶಗಳಿಗೆ ಕೊಡಲು ನೀವು ಒಪ್ಪಂದವನ್ನು ಮಾಡಿಕೊಂಡಿದ್ದೀರಾ ?

ಡಾ॥ ಆರ್. ನಾಗನಗೌಡ.—ಇಲ್ಲ. ಪೂರ್ವದ ಒಪ್ಪಂದ ಬಿಟ್ಟು ಹೊಸದಾಗಿ ಯಾರಿಗೆ ಕೊಡುವುದಕ್ಕೂ ನಾವು ಸಿದ್ಧವಾಗಿಲ್ಲ.

ಶ್ರೀ ಜಿ. ನಾರಾಯಣಗೌಡ.—ಈಗ ಬೊಂಬಾಯಿ ಸರ್ಕಾರದೊಡನೆ ಒಂದು ಕರಾರು ಮಾಡಿಕೊಳ್ಳುತ್ತಿಲ್ಲವೆ ?

ಡಾ॥ ಆರ್. ನಾಗನಗೌಡ.—1949ರಲ್ಲೇ ಮಾಡಿಕೊಂಡಿತ್ತು, ಈಗಲ್ಲ.

ಶ್ರೀ ಜಿ. ನಾರಾಯಣಗೌಡ.—ತಾವು ಪುನರಾವೋಚನೆಮಾಡಿ ಅದನ್ನು ಕೈಬಿಡುವುದು ಒಳ್ಳೆಯದಲ್ಲವೆ ?

ಶ್ರೀ ಕೆ. ಹನುಮಂತಯ್ಯ.—ಜೋಗಿನಲ್ಲಿ ಮಹಾತ್ಮಗಾಂಧಿ ವಿದ್ಯುಚ್ಛಕ್ತಿ ಕೆಲಸ ತೆಗೆದುಕೊಂಡಾಗ ಬೊಂಬಾಯಿ ಸರ್ಕಾರದ ಅನುಮತಿ ಅವಶ್ಯಕವಾಗಿತ್ತು. ಆ ಅನುಮತಿಯಿಲ್ಲದೆ ಆ ಕಾರ್ಯ ಮುಂದುವರಿಸುವುದಕ್ಕಾಗುತ್ತಿರಲಿಲ್ಲ. ಆದ್ದರಿಂದ ಅವರು ಅನುಮತಿ ಕೊಟ್ಟಾಗ, ಈ ವಿದ್ಯುಚ್ಛಕ್ತಿ ಉತ್ಪತ್ತಿಯಾದಾಗ ಇಷ್ಟು ಕೊಡಬೇಕೆಂದು ಹಿಂದೆ ಒಂದು ಒಪ್ಪಂದವಾಗಿತ್ತು. ಆ ಒಪ್ಪಂದಕ್ಕನುಸಾರವಾಗಿ ನಡೆಯಬೇಕು. ಈಗ ಆಗಿರುವ ಒಪ್ಪಂದ ಬರೀ ದರದ ವಿಚಾರಕ್ಕೆ ಸಂಬಂಧಪಟ್ಟಿದೆ, ಕ್ವಾಂಟಿಟಿ ವಿಚಾರ ಅದರಲ್ಲಿಲ್ಲ.

Mr. SPEAKER.—Question hour is over.

QUESTIONS FOR ANSWERS ON THE DAY

(But not taken up)

Depressed Class People (Scheme to Grant Loans).

Q.—42. Sri H. K. SIDDAIYA (Belur—Scheduled Castes).—

Will the Government be pleased to state :—

(*a*) whether they have introduced a scheme for granting loans for Depressed Class people ;

(*b*) whether it is a fact that they sanctioned Rs. 250 per grantee ;

(*c*) whether it is a fact that all these inconveniences are due to the